Indian Journal of History and Archaeology

ISSN (E):2582-225X
VOL-2, ISSUE -6, MAR-APRIL, 2021, 01-12

# ದಾಸರ ದಾರ್ಶನಿಕ ಕೀರ್ತನೆಗಳ ಚಿಂತನೆಯಲ್ಲಿ ಸಮಾಜ ಪರಿವರ್ತನೆಯ ಹಾದಿಗಳು

**ಮಂಜಣ್ಣ ಕೆ.ಎಂ**

**ಮಂಜಣ್ಣ ಕೆ.ಎಂ**
ಪಿಎಚ್.ಡಿ. ಸಂಶೋಧನಾರ್ಥಿ
ಚರಿತ್ರೆ ವಿಭಾಗ
ಕನ್ನಡವಿಶ್ವವಿದ್ಯಾಲಯ,ಹಂಪಿ

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ವಿಶಿಷ್ಟವಾದಂಥ ಚರಿತ್ರೆಯನ್ನು ಸೃಷ್ಟಿಸಿದೆ. ಮತ್ತೇ ಹಲವು ಹತ್ತು ಪ್ರಥಮಗಳಿಗೆ *ಮುನ್ನುಡಿಯನ್ನು ಕೂಡ ಬರೆದಿರುತ್ತದೆ ಎಂಬುದಕ್ಕೆ ಪುರಾವೆಗಳು ದೊರಕುತ್ತವೆ.* ಈ ನೆಲೆ ಹಿನ್ನೆಲೆಯಲ್ಲಿ ಪರಿವೀಕ್ಷಿಸಿದಾಗ; ವಿಜಯನಗರದ ಆಡಳಿತದ ಕಾಲದಲ್ಲಿ ಕನಕದಾಸರು ಮತ್ತು ಪುರಂದರದಾಸರು ತಮ್ಮ ತಮ್ಮ ಜ್ಞಾನದರ್ಶನದ ಮೂಲಕ ದಾರ್ಶನಿಕತೆಯ ಕೀರ್ತನೆಗಳನ್ನು ರಚಿಸಿದ್ದು ಕೂಡ ಯಾರನ್ನೂ ಮೆಚ್ಚಿಸುವುದಕ್ಕಲ್ಲ. ಅದಕ್ಕೆ ಬದಲಿಯಾಗಿ ತಮ್ಮ ವ್ಯಕ್ತಿ ಜೀವನದಲ್ಲಿ, ಅಂದಿನ ಸಾಮಾಜಿಕ ಪರಿಸರದಲ್ಲಿ ಕಂಡುಂಡ ಸ್ವ–ಅನುಭವಗಳನ್ನು ಆಧರಿಸಿ ಕೀರ್ತನೆಗಳನ್ನು ರಚಿಸಿ ಅವುಗಳನ್ನು ಹಾಡುತ್ತಲೇ ಸಮಾಜ ಪರಿವರ್ತನೆಯ ಹಾದಿಗಳನ್ನು ಸೃಷ್ಟಿಸಿದ್ದಾರೆ. ದಾಸ ಪರಂರೆಯಲ್ಲಿ ಪ್ರಧಾನವಾಗಿಯೇ ಭಕ್ತಿ ಪ್ರಸಾರ, ಮತಧರ್ಮಗಳ ಉಪದೇಶ, ವೈರಾಗ್ಯ, ಬೋಧನೆ ಇವುಗಳ ಮೂಲಕ ನೊಂದ ಜೀವಗಳ ಸಾಂತ್ವನವೇ ಆಗಿತ್ತು. ಇವೇ ದಾಸರ ಕೀರ್ತನೆಗಳ ಮುಖ್ಯ ಉದ್ದೇಶಗಳೇ ಆಗಿದ್ದವು. ಇವರಿಗೆ ಯಾವುದಾದರೊಂದು ಸಂದರ್ಭವು ತೀವ್ರವಾಗಿ ಮನಸ್ಸನ್ನು ತಟ್ಟಿದಾಗ ಸ್ವತಃ ಅದರಿಂದ ಸ್ಫೂರ್ತಿಗೊಂಡು ಕೀರ್ತನೆಗಳನ್ನು ಕಟ್ಟಿ ಹಾಡಿದರಲ್ಲದೆ ಬರಹರೂಪದಲ್ಲಿ ದಾಖಲಿಸಿದ್ದಾರೆ. ಇವರ ಎಲ್ಲಾ ಹಾಡುಗಳು ಶ್ರೋತೃಗಳ ಸಮ್ಮುಖದಲ್ಲಿಯೇ ರಚನೆಯಾಗಿರಲು ಸಾಧ್ಯ ಎನ್ನಬಹುದು. ಧಾರ್ಮಿಕ ವಿಧಿಗಳನ್ನು, ಹಬ್ಬ ಹರಿದಿ ನಗಳನ್ನು ಆಚರಿಸುವುದಕ್ಕಾಗಿ ಗುಡಿಗುಡಾರಗಳನ್ನು ಜನರು ಸೇರಿದಾಗ ಅಲ್ಲಿ ಭಜನೆ, ಹರಿಕಥೆ, ಮದುವೆಯಂಥ ಶುಭ ಸಮಾರಂಭಗಳಲ್ಲಿ ಆಯಾ ಸಂದರ್ಭ ಹಾಗೂ ಸನ್ನಿವೇಶಕ್ಕೆ ಅನುಗುಣವಾದ ಹಾಡುಗಳು ಹುಟ್ಟಿದವು. ಹರಿನಾಮ

ಕುರಿತಂಥ ಭಜನೆಯು ನಡೆಯುವಾಗ ಈ ಕೀರ್ತನಕಾರರೊಡನೆ ಇತರರೂ ಕೂಡ ಕೂಡಿಕೊಳ್ಳುತ್ತಿದ್ದರು. ಇನ್ನೂಳಿದವರು ಭಾವಾನುಭಾವದಲ್ಲಿ ಕೇಳುತ್ತಾ ಅವರ ಜೊತೆಜೊತೆಯಲ್ಲಿ ತಾವು ಕೂಡ ಧ್ವನಿಗೂಡಿಸಿ ಹರಿಯನ್ನು ಈ ಮೂಲಕವಾಗಿಯೂ ಸ್ಮರಿಸುತ್ತಿದ್ದರು. ಅದುವೇ ದಾಸರ ಕೀರ್ತನೆಗಳ ರಸ, ಸತ್ತ್ವ ಮತ್ತು ಸಾರವೇ ಆಗಿರುತ್ತದೆ.

ಹರಿದಾಸರು ಪ್ರಧಾನ ನೆಲೆಯಲ್ಲಿ ವಿಷ್ಣುವಿನ ಪಾರಮ್ಯವನ್ನು ಈ ಕನ್ನಡ ನೆಲದ ಜನತೆಗೆ ತಿಳಿಸುವ ಗುರಿಯನ್ನು ಇಟ್ಟುಕೊಂಡಿದ್ದರು. ಆದ್ದರಿಂದಲೇ ಹರಿದಾಸರು ಜನಸಾಮಾನ್ಯರಿಗೆ ಅರ್ಥವಾಗುವಂತೆಯೇ ಸ್ಥಳೀಯವಾಗಿ ಇರುವಂಥ ಜನಪದರ ನಂಬಿಕೆ, ಆಚಾರ, ವಿಚಾರಗಳು, ರೀತಿ–ನೀತಿಗಳು, ಸಂಪ್ರದಾಯಗಳು ಮತ್ತು ಅಲ್ಲಿನ ಜನಭಾಷೆಗಳು, ಇವೆಲ್ಲವೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ದಾಸರ ಕಾಲದಲ್ಲಿ ಬಳಕೆಯಾದುದ್ದನ್ನು ಗುರುತಿಸಬಹುದು. ದಾಸರು ತಮ್ಮ ಜೀವಿತದ ಅವಧಿಯಲ್ಲಿ ಕಟ್ಟಿಕೊಟ್ಟಂಥ ಪರಂಪರೆಯಲ್ಲಿ ಮಾನವೀಯ ಮತ್ತು ಜನಪರ ಮೌಲ್ಯಗಳು ಇಂದಿಗೂ ಎಂದೆಂದಿಗೂ ಕೂಡ ಜೀವಂತವಾಗಿವೆ. ಇದೇ ಅಲ್ಲದೆಯೇ ದಾಸರು ಜನಸಮುದಾಯದೊಡನೆ ತಾವೂ ಕೂಡ ಒಬ್ಬರಾಗಿಯೇ ಬದುಕಿ, ಆ ಸಮಾಜದಲ್ಲಿ ತಲೆದೂರಿರುವಂಥ ಅನೇಕ ಅನೇಕ ಜ್ವಲಂತ ಸಮಸ್ಯೆಗಳಿಗೆ ಸೂಕ್ತವಾದಂಥ ಪರಿಹಾರವನ್ನು ಕಂಡುಕೊಳ್ಳುವ ಮತ್ತು ಅವುಗಳ ಮೂಲಕ ಸಮಸ್ಯೆಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿಯೇ ಮಾಡಿದವರು. ಮತ್ತೇ ಆ ಮೂಲಕ ಸಮಾಜದ ಕಿಲುಬಿಗೆ ಅಂಟಿಕೊಂಡಿರುವ ಮಲೀನತೆಯ ಕೊಳಕು ತೊಳೆಯುವ ಕಾಯಕವನ್ನು ಮಾಡಿದವರು. ಹರಿದಾಸರು ಬದುಕನ್ನು ವಿಶಾಲವಾಗಿ ಕಾಣುವುದರ ಮೂಲಕ ಆ ಬದುಕಿನಲ್ಲಿ ಏನೇ ಎಡರು–ತೊಡರುಗಳು ಬಂದರೂ ಕುಗ್ಗದೆ **'ಈಸಬೇಕು ಇದ್ದು ಜೈಸಬೇಕು'** ಎಂಬ ದಿಟ್ಟ ನಿಲುವನ್ನು ಹೊಂದಿದವರಾಗಿದ್ದರು.

ದಾಸರ ಕೀರ್ತನೆಯ ರಚನೆಗಳು ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಮೂಲಸೆಲೆಯಲ್ಲಿಯೇ ಬಹುಮುಖ್ಯವಾಗಿ ಕಟ್ಟಿಕೊಡುತ್ತವೆ. ಹಾಗೆಯೇ, ಸಮಾಜದಲ್ಲಿ ತಲೆದೂರುವಂಥ ಹಲವು ಹತ್ತು ಸಮಸ್ಯೆಗಳಿಗೆ ಮುಖಾಮುಖಿಯಾಗಿ ಗಟ್ಟಿಯಾಗಿಯೇ ನಿಂತು ಈ ಹರಿದಾಸರು ತಟ್ಟನೆ ಪ್ರತಿಕ್ರಿಯಿಸುವ, ಪ್ರತಿಭಟಿಸುವ ನೆಲೆ, ಸ್ಥಾಪಿಸುವ ಜನಮೌಲ್ಯಗಳು ಇಂದಿಗೂ ಪ್ರಸ್ತುತವಾಗಿರುತ್ತವೆ. ಆದ್ದರಿಂದಲೇ ದಾಸರ ಸಾಹಿತ್ಯದಲ್ಲಿ ಹೆಚ್ಚು ಹೆಚ್ಚು ಮಹತ್ತ್ವವಿರುವುದನ್ನು ತಳಸ್ಪರ್ಶಿಯಾಗಿ ಗಮನಿಸಬಹುದು. ದಾಸರು ಏನನ್ನು ಸಮಾಜಕ್ಕೆ ತಿಳಿದರೋ ಹಾಗೆ ಬದುಕಿ ತೋರಿಸಿಕೊಟ್ಟರು. ಅಂದರೆ ನುಡಿದಂತೆ ನಡೆದುಕೊಂಡರು ನಡೆ ನುಡಿಯಲ್ಲಿ ಒಂದಾದರು. ಜನರಿಗೆ ಹೀಗೆ ಬದುಕಬೇಕೆಂಬ ಸಮಾಜ ಪರಿವರ್ತನೆಯ ದಾರಿಯನ್ನು ದಾಸರು ತೋರಿಸಿಕೊಟ್ಟವರು. ಅಲ್ಲದೇ ಮನುಷ್ಯನ ಮನಸ್ಸು ಮರ್ಕಟನಂತೆ ಚಂಚಲವಾದುದು ಎಂಬ ಮಾತಿನಂತೆ

***'ಕೋತಿಯಂತ ಮನಸ್ಸನ್ನು ನಿಲ್ಲಿಸುವುದು ಬಲುಕಷ್ಟ'*** ಎಂಬಂಥ ಇವರ ಕೀರ್ತನೆಗಳ ಸಾಲುಗಳು ಎಲ್ಲರ ಆತ್ಮಾವಲೋಕನಕ್ಕೆ ಪ್ರೇರಕಾ ಶಕ್ತಿಯಾಗಿ ಪ್ರೇರಣೆಯನ್ನು ನೀಡುವಂತಿವೆ.

ಹರಿದಾಸ ಸಾಹಿತ್ಯವೂ ಜನಮುಖಿ, ಸಮಾಜಮುಖಿ, ಜೀವನಮುಖಿ ಹಾಗೂ ಬಹುಮುಖ್ಯವಾಗಿ ಸಂವೇದನಾತ್ಮಕವೆನಿಸಿರುತ್ತದೆ. ಈ ನೆಲೆ ಹಿನ್ನೆಲೆಯಲ್ಲಿ ಕರ್ನಾಟಕದ ಸಂದರ್ಭದಲ್ಲಿದ್ದಂಥ ಹರಿದಾಸರು ಜನಸಾಮಾನ್ಯರು ಸ್ಥಳೀಯವಾಗಿ ಆಡುವ ಭಾಷೆಯನ್ನೇ ಹೆಚ್ಚು ಹೆಚ್ಚು ಬಳಸಿ ಆ ಜನರ ಕಷ್ಟ ಸುಖಗಳಿಗೆ ತಟ್ಟನೇ ಸ್ಪಂದಿಸುವುದರ ಮೂಲಕ ಅತ್ಯಂತ ಸಭ್ಯತೆಯಿಂದಲೇ ಸಾಮಾಜಿಕ ಕಳಕಳಿಯನ್ನು ತೋರಿದ್ದಾರೆ. ಇದೇ ಅಲ್ಲದೇ ಕನ್ನಡ ನೆಲದ ದಾಸರ ಈ ಜನಧ್ವನಿ ಸಾಹಿತ್ಯವು ಮನುಷ್ಯನ ಬದುಕಿನ ಕಲ್ಪನೆಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟ ಸಾಹಿತ್ಯವೇ ಆಗಿರುತ್ತದೆ ಎಂದೇ ಹೇಳಬಹುದು. ಹರಿದಾಸರು ತಮ್ಮ ಬದುಕಿನ ಕಾಲಮಾನದಲ್ಲಿ ಸ್ವತಃ ಕಂಡುಕೊಂಡ ಹಾಗೂ ಅವರ ಕಾರ್ಯಕ್ಷೇತ್ರದಲ್ಲಿನ ಸಾಮಾಜಿಕ ಪರಿಸರದಲ್ಲಿ ಆದಂಥ ಅನುಭವಗಳನ್ನು ತಮ್ಮ ಪ್ರತಿಭಾ ಶಕ್ತಿಯಿಂದ ಕೀರ್ತನೆಗಳ ಮುಖಾಂತರ ಜನರ ಮುಂದಿಡುವ ಪ್ರಯತ್ನವನ್ನು ಮಾಡಿದರು. ಜನಸಾಮಾನ್ಯರ ದಿನನಿತ್ಯದ ಬದುಕಿನ ನಡವಳಿಕೆಯಲ್ಲಿ ಏನೆಲ್ಲಾ ತಪ್ಪುಗಳು, ಕುಂದುಕೊರತೆಗಳು, ಅನಾಚಾರಗಳನ್ನು ಕಂಡರೋ ಅವೆಲ್ಲವುಗಳನ್ನು ಧೈರ್ಯವಾಗಿಯೇ ಖಂಡಿಸುವುದರ ಮೂಲಕ ಅಂಥ ಜನರನ್ನು ತಮ್ಮ ತಮ್ಮ ಕೀರ್ತನೆಗಳ ಮೂಲಕ ತಿದ್ದುವ ಪ್ರಯತ್ನವನ್ನು ಮಾಡಿದರು. ಬದುಕಿನ ಮೌಲ್ಯಗಳನ್ನು ಮನದಟ್ಟು ಮಾಡಿಕೊಟ್ಟರು. ಸಮಾಜದಲ್ಲಿ ನಡೆಯುತ್ತಿರುವ ಆಡಂಬರದ, ಡಂಭಾಚಾರದ ಬದುಕನ್ನು ಖಂಡಿಸುತ್ತಾ ಜೀವನದಲ್ಲಿ ತನು–ಮನ ಅಂತರಂಗ–ಬಹಿರಂಗ, ಒಳ–ಹೊರಗು, ನಡೆ–ನುಡಿಗಳು ಶುದ್ಧಿಯಾಗಿ ಒಂದಾಗಿ ಬದುಕಬೇಕು ಎಂಬುದನ್ನು ಸಾರಿಸಾರಿ ಹೇಳಿದರು. ಸಮಾಜ ಸುಧಾರಣೆಯ ಕಾರ್ಯಕ್ಕಾಗಿ ತಮ್ಮ ಇಡೀ ಬದುಕನ್ನು ಅರ್ಪಿಸಿಕೊಂಡರು. ದಾಸರು ದ್ವೈತಮತದ ಅನುಯಾಯಿಗಳಾಗಿದ್ದರೂ ಕೂಡ ವಿರಾಗಿಗಳಾಗಿದ್ದುಕೊಂಡು ಸಮಾಜದಿಂದ ದೂರ ಉಳಿಯದೇ ಅದರ ಸಂಪರ್ಕವನ್ನು ಕಳೆದುಕೊಳ್ಳದೆ, ಅದರಲ್ಲಿ ನಿರ್ಲಿಪ್ತರಾಗಿದ್ದು ಕೊಂಡೇ ಜನಸಾಮಾನ್ಯರ ಸಮಸ್ಯೆಗಳನ್ನು ವಸ್ತುನಿಷ್ಠತೆಯಿಂದಲೇ ಬಹುಸೂಕ್ಷ್ಮವಾಗಿ ಗ್ರಹಿಸಿ ಅವರ ಸರ್ವಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಅವುಗಳಿಗೆ ಪರಿಹಾರೋಪಾಯಗಳನ್ನು ಕಂಡುಹಿಡಿಯಲು ಸದಾಕಾಲವೂ ಕೂಡ ಹವಣಿಸಿದರು. ದಾಸರು ಮಾನವ ನಿರ್ಮಿತ ಸಮಾಜದಲ್ಲಿ ಪ್ರಧಾನವಾಗಿ ಕಂಡುಬರುವ ಬೌದ್ಧಿಕತೆ, ಧರ್ಮಾಂಧತೆ, ಅಂಧಶ್ರದ್ಧೆತೆಯಂಥ ಲೋಪದೋಷಗಳ ನಿವಾರಣೆಗಾಗಿ ಬದುಕಿನ ಉದ್ದಕ್ಕೂ ಪ್ರಯತ್ನಿಸಿದ್ದರು. ಹಾಗೆಯೇ ಈ ಮಾನವ ನಿರ್ಮಿತ ಸಮಾಜದಲ್ಲಿ ದಾರಿತಪ್ಪಿದವರಿಗೆ ಸರಿಯಾದ ಮಾರ್ಗವನ್ನು ತಮ್ಮ ಕೀರ್ತನೆಗಳ ಚಿಂತನೆಯ ಮೂಲಕ ತೋರಿಸಿಕೊಟ್ಟವರು.

ದಾಸದ್ವವರು ರಚಿಸಿದ ಕೀರ್ತನಾ ಸಾಹಿತ್ಯವು ಹೆಚ್ಚು ಜನಮುಖಿ ಸಾಹಿತ್ಯವೆನಿಸಿರುತ್ತದೆ. ಮತ್ತೇ ಅದು ಸಮಾಜದಲ್ಲಿ ಪರಿಸರದ ಸುತ್ತಮುತ್ತಲ್ಲಿನ ಸಾಮಾನ್ಯ ಜನರ ಮೇಲೆ ನಿರಂತರವಾದ ಪ್ರೇರಣೆ ಮತ್ತು ಪ್ರಭಾವವನ್ನು ತನ್ನದೇಯಾದ ರೀತಿಯಲ್ಲಿ ಬೀರುವ ಮೂಲಕ, ಜ್ಞಾನ ಮತ್ತು ಭಕ್ತಿಯು ಮಹಾನದಿಯಂತೆ ಹರಿದು ಸಾರ್ವತ್ರಿಕ ಪ್ರಸಾರಕ್ಕೆ ನಾಂದಿಯಾಯಿತು. ದಾಸರ ಸಾಹಿತ್ಯದ ವಿಶೇಷವೆಂದರೆ; ದೇಶೀಯತೆ ಮತ್ತು ಗೇಯತೆಗಳೆರಡು ಈ ದಾಸರ ಕೀರ್ತನೆಗಳಲ್ಲಿ ಮೇಳೈಸಿದ್ದರಿಂದ ಇವರ ಸಾಹಿತ್ಯವು ಜನಪರ ಸಾಹಿತ್ಯವೆನಿಸಿತು. ಹಾಗೆಯೇ ದಾಸರ ಸಾಹಿತ್ಯವು ಪ್ರಧಾನವಾಗಿ ಜನರ ಮಧ್ಯೆ ಹುಟ್ಟಿದ ಆಶು ರಚನೆಗಳಾಗಿದ್ದು, ಅವುಗಳಲ್ಲಿ ದಾಸರ ಲೋಕಾನುಭವವನ್ನು ಗುರುತಿಸಬಹುದು. ಇದಕ್ಕೆ ಪುರಂದರದಾಸರ 'ಕದವ ಮುಚ್ಚಿದಳದೆಕೋ ಚಿಲುಕ ಅಲ್ಲಾಡುತಿದೆ' 'ಇಕ್ಕಲಾರೆ ಕೈ ಎಂಜಲು' 'ಚಿಕ್ಕ ಮಕ್ಕಳು ಅಳುತಾರೆ ಹೋಗೋ ದಾಸಯ್ಯ' ಎಂಬಂಥ ಕೀರ್ತನೆಗಳು ಇಂದಿಗೂ ಕೂಡ ಚಾರಿತ್ರಿಕ ಸಾಕ್ಷಿಯೇ ಆಗಿರುತ್ತವೆ. ದಾಸರ ಯಶಸ್ಸಿಗೆ ಪೂರಕವಾದಂಥ ಅನೇಕ ಮಾನವೀಯ ಮತ್ತು ನೈತಿಕ ಮೌಲ್ಯಗಳನ್ನು ಕಾಣಬಹುದು. ಆ ಕಾರಣ ಮತ್ತು ಪರಿಣಾಮದಿಂದಾಗಿಯೇ ಹರಿದಾಸರು ಮತ್ತು ಗ್ರಾಮೀಣ ಜನಪದರಲ್ಲಿ ಸಾಮಾಜಿಕ ಚಿಂತನೆಗಳ ಬಗೆಗೆ ಹೆಚ್ಚಿನ ಸಾಮ್ಯತೆಗಳು ಇರುವುದನ್ನು ಗುರುತಿಸಬಹುದು. ಅವುಗಳನ್ನು ಪ್ರಮುಖವಾಗಿ ಈ ಕೆಳಕಂಡ ಅಂಶಗಳ ಆಧಾರದ ಮೇಲೆ ಧೃಡೀಕರಿಸಬಹುದು. ಅವುಗಳೆಂದರೆ;

ಜನರಲ್ಲಿರುವ ಕೆಟ್ಟ ವಿಚಾರಗಳು, ವಿಷಯಗಳು, ಕೆಟ್ಟ ಆಲೋಚನೆಗಳನ್ನು, ಕೆಟ್ಟ ಕಾರ್ಯಗಳನ್ನು ವಿರೋಧಿಸುವುದರ ಮೂಲಕ ಆ ಕೆಟ್ಟತನವನ್ನು ತಿದ್ದಿ ಸಮಾಜವನ್ನು ಉದ್ಧರಿಸುವುದೇ ಹರಿದಾಸರ ಧ್ಯೇಯವಾಗಿತ್ತು. ಜನರು ತಮ್ಮ ಬದುಕಿನಲ್ಲಿ ಸಾರ್ಥಕತೆಯನ್ನು ಪಡೆಯಬೇಕು. ಆಮೂಲಕ ಉತ್ತಮ ಸಮಾಜ ನಿರ್ಮಾಣವಾಗಬೇಕು ಎಂಬುದೇ ಅವರ ಮುಖ್ಯ ಉದ್ದೇಶವಾಗಿತ್ತು. ಹರಿದಾಸರ ನೀತಿಯ ಮಾತುಗಲು ಸಮಾಜದಲ್ಲಿರುವ ಅಜ್ಞಾನಿಗಳಿಗೆ ಉಪದೇಶಿಸುವ, ಕಿಡಿಗೇಡಿಗಳಿಗೆ ಬುದ್ಧಿಮಾತನ್ನು ಹೇಳುವ ಮೂಲಕ ಅವರಲ್ಲಿರುವ ಅಂದಶ್ರದ್ಧೆ ಮತ್ತು ಮೌಢ್ಯಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡಿದವು. ಈ ಸಾಧನೆಗಾಗಿ ಸುಳ್ಳನ್ನು ಹೇಳಬೇಡ. ಪರಧನಕ್ಕೆ, ಪರಸ್ತ್ರೀಯರ ಆಸೆಯನ್ನು ಬಿಡು, ದುರಾಸೆಯನ್ನು ಪಡಬೇಡ, ಹೆಚ್ಚಿನದನ್ನು ಬಯಸಬೇಡ, ಪಡೆದದ್ದೆಲ್ಲವೂ ಪೂರ್ತಿಕರ್ಮವೆಂದು ತಿಳಿದು ಹರಿಯನ್ನು ಆರಾಧಿಸುವುದರ ಮೂಲಕ ಮೋಕ್ಷವನ್ನು ಪಡೆಯಬೇಕೆಂಬ ಉಪದೇಶದ ಮಾತುಗಳನ್ನು ಇವರ ಕೀರ್ತನೆಗಳಲ್ಲಿ ಪ್ರಧಾನವಾಗಿಯೇ ಕಂಡುಬರುತ್ತವೆ ಎಂದು ಹೇಳಬಹುದು.

*"ನೋಡದಿರು ಪರಸ್ತ್ರೀಯರ*
*ನೋಡಿದರೆ ಕೆಡಬಹುದು ತಪ್ಪದಿದಕೋ*
*ನೋಡಿದರೆ ಸ್ತ್ರೀ ಹತ್ಯವು ನುಡಿಸಿ ಮಾ*

*ತಾಡಿದರೆ ಗೋಹತ್ಯವು*

*ಕಾಡಿದರೆ ಶಿಶು ಹತ್ಯವು ಮೈ*

*ಗೂಡಿಸಿದರೆ ಬ್ರಹ್ಮಹತ್ಯವು."*

ಪುರಂದರದಾಸರು ಪರಸ್ತ್ರೀ ವ್ಯಾಮೋಹದಿಂದಾಗುವ ದೊಡ್ಡ ದುರಂತವನ್ನೇ ತಿಳಿಸಿದ್ದಾರೆ. ಇವರ ಪ್ರಕಾರ ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಯಿಂದಲೂ ಪರಸ್ತ್ರೀ ವ್ಯಾಮೋಹ ಸಲ್ಲದು. ಪರಸ್ತ್ರೀಯನ್ನು ಬೆಂಕಿ ಎಂಬಂತೆ ಕಾಣುವುದು ವಿಹಿತವೆಂದು ದಾಸರು ಸೂಚಿಸಿದ್ದಾರೆ. ಹೆಣ್ಣು-ಗಂಡು ಪರಸ್ಪರ ಆಕರ್ಷಣೆಗೆ ಒಳಗಾದರೂ, ಹಿತ-ಮಿತದಿಂದಿದ್ದರೆ ಮಾತ್ರ ಸೃಷ್ಟಿ ಕ್ರಿಯೆಯಲ್ಲಿ ಸಾರ್ಥಕ್ಯವನ್ನು ಪಡೆಯುತ್ತದೆ. ಹೆಣ್ಣು ಗಂಡಿಗೆ ಈಗಾಗಲೇ ತಾಯಿಯಾಗಿ, ಹೆಂಡತಿಯಾಗಿ, ಪುತ್ರಿಯಾಗಿ, ಕಾಡಿ ಸಂಸಾರವೆಂಬ ಕೂಪದಲ್ಲಿ ಸಿಲುಕಿಸಿದ್ದಾಳೆ. ಇನ್ನೂ ನೀನು ಎಚ್ಚೆತ್ತುಕೊಳ್ಳದೇ ಪರರ ಹೆಣ್ಣಿಗೆ ಆಸೆ ಪಟ್ಟರೆ, ಮುಕ್ತಿ ಪಥದಿಂದ ಹಿಮ್ಮೆಟ್ಟುವೆ ಎಂಬ ಕಿವಿ ಮಾತನ್ನು ಹೇಳಿದ್ದಾರೆ. ಹಾಗಾಗಿ ದಾಸರು ಧನ, ಭೂಮಿ, ಹೆಣ್ಣು ಇಂತಹ ಲೌಕಿಕ ಆಸೆಗಳ ವ್ಯಾಮೋಹವುಳ್ಳ ಜನರ ವರ್ತನೆಯನ್ನು ಖಂಡಿಸುತ್ತಾ, ಪ್ರತಿಯೊಬ್ಬರೂ ಪಂಚೇಂದ್ರಿಯಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕೆಂಬ ಅರಿವನ್ನು ಸಮಾಜಕ್ಕೆ ಮೂಡಿಸಿದ್ದಾರೆ. ತಮ್ಮ ರಚನೆಗಳಲ್ಲಿ ಸಂಕೀರ್ಣವಾಗಿದ್ದ ಮತತ್ವ ಹಾಗೂ ಆಧ್ಯಾತ್ಮಿಕ ಸಂಗತಿಗಳನ್ನು ಸಂಗೀತ ಮಾಧ್ಯಮದಲ್ಲಿ, ಸರಳ ಕನ್ನಡದಲ್ಲಿ, ದೊರಕಿಸಿದ್ದು ಮಹತ್ತರವಾದ ವಿಷಯವೆನಿಸಿದೆ.

ದಾಸರು ರಚಿಸಿದ ಸಾಹಿತ್ಯವು ಪಂಡಿತರಿಗಲ್ಲದೆ, ಸಮಾಜದಲ್ಲಿನ ಸಾಮಾನ್ಯ ವರ್ಗದವರಿಗೂ ಎಟಕುವಂತೆ ಮಾಡಿತು. ಆ ಜನಸಾಮಾನ್ಯರೂ ಸಾಧನೆಯ ಹಾದಿಯಲ್ಲಿ, ಸನ್ಮಾರ್ಗದಲ್ಲಿ ಸಾಗಲು ಸಹಕಾರಿಯಾಯಿತು. ಅಂತರಂಗ ಶುದ್ಧಿಯ ಜೊತೆಗೆ ಸಮಾಜ ಸಮಾಜದದಲ್ಲಿನ ಶುದ್ಧಿಗೂ ಕೂಡ ಹೆಚ್ಚಿನ ರೀತಿಯಲ್ಲಿ ಒತ್ತನ್ನು ಕೊಟ್ಟಿತು. ಬದುಕಿನ ಬಹುಮುಖ ದರ್ಶನ ಅನುಭವಗಳನ್ನು ಒಗ್ಗೂಡಿಸಿ ಅದನ್ನು ಮೂಲಭೂತ ಮಾನವೀಯ ಮೌಲ್ಯಗಳಾಗಿ ರೂಪಿಸಿ, ಜನತೆಯಲ್ಲಿ ಬಿತ್ತಿದ ಸಾಹಿತ್ಯವೆನಿಸಿತು. ಸತ್ಯವನ್ನು ಮುಚ್ಚುಮರೆಯಿಲ್ಲದೆ ನೇರವಾಗಿ ತಪ್ಪುಗಳನ್ನು, ಸುಳ್ಳುಗಳನ್ನು, ಖಂಡಿಸಿ ಒಳ್ಳೆಯ ಕೆಲಸಗಳನ್ನು ಮಾಡುವಂತೆ ಪ್ರೇರೇಪಿಸಿದ ಮಾಧ್ಯಮವೆನಿಸಿತು. ಇದೇ ಅಲ್ಲದೇ ಸಂಸ್ಕೃತ ಭಾಷೆಯ ಕಲಿಕೆಯಿಲ್ಲದೆ ಕನ್ನಡದಲ್ಲಿ ಆಧ್ಯಾತ್ಮಿಕ ವಿಚಾರಗಳನ್ನು ಆಳವಾಗಿ ವಿಸ್ತಾರವಾಗಿ ಅರಿಯುವಂತೆ ಮಾಡಿದ ಕೀರ್ತಿ ದಾಸರದು.

ದಾಸರು ಜನಸಾಮಾನ್ಯರಲ್ಲಿ ಇರಬೇಕಾದ ಸಜ್ಜನ ಗುಣಗಳನ್ನು ಹೀಗೆ ತಿಳಿಸಿದ್ದಾರೆ; "ಹೀನ ಚಿಂತನೆ, ಹೀನ ಕಾರ್ಯವನ್ನು ಮಾಡಬಾರದು, ಯಾವಾಗಲೂ ಪರಮಾತ್ಮನ ಚಿಂತನೆಯನ್ನು ನಡೆಸಬೇಕು. ಪರವಸ್ತುಗಳನ್ನು ಬಯಸಬಾರದು. ದೇಹ ಪೋಷಣೆಯೇ ಪ್ರಧಾನವಾಗಿ ತಿಳಿಯಬಾರದು. ಪರಮಾತ್ಮನಲ್ಲಿ

ಎಂದು ವಿಸ್ಮೃತಿಯನ್ನು ಹೊಂದಬಾರದು. ಈ ಸಜ್ಜನ ಗುಣಗಳಿಗೆ ವಿರುದ್ಧವಾಗಿ ಬದುಕುವ ಜೀವನ ಹೀನವಾದದ್ದು. ಹೀಗೆ ಬಾಳಬಾರದೆಂಬ ಎಚ್ಚರಿಕೆಯ ಮಾತುಗಳನ್ನು ಸಮಾಜಕ್ಕೆ ನೀಡಿದರು." ಅಲ್ಲದೆ ಇವರು ಅನ್ಯರಲ್ಲಿ ಶ್ರೀಹರಿಯ ಸನ್ನಿದಾನವನ್ನು ಗುರುತಿಸಿ ಜನರನ್ನು ಗೌರವಿಸುವ ಸಂಸ್ಕೃತಿಯನ್ನು ಬೆಳೆಸಿದರು.

ಹರಿದಾಸರು ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರವನ್ನು ತಮ್ಮ ಉಸಿರಾಗಿಕೊಂಡು ಹಲವು ಹತ್ತು ಕೀರ್ತನೆಗಳನ್ನು ಸಹಜವಾಗಿ ರಚಿಸುವ ಮೂಲಕ ವಚನಕಾರರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಕೈಯಲ್ಲಿ ಚಿಟಿಕೆ, ತಂಬೂರಿ ಹಿಡಿದು ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಹಾಡುತ್ತಾ; ಜನರ ಮನಸ್ಸನ್ನು ವೇಷಭೂಷಣಗಳು ಹಾಡಿಕೆ, ನೃತ್ಯ, ತಾಳ, ತಂಬೂರಿ ಚಿಟಿಕಿಗಳ ಸಹಯೋಗ ಜನರತ್ತ ಸೆಳೆಯಲು ಸಹಾಯಕವಾಯಿತು. ಇವರು ತಮ್ಮ ರಚನೆಗಳಲ್ಲಿ ನೀತಿ, ಜ್ಞಾನ, ಭಕ್ತಿ, ಡಂಭಾಚಾರ, ಕಪಟತನ, ವಾತ್ಸಲ್ಯ, ಪ್ರಾಮಾಣಿಕತೆ, ಅಹಿಂಸೆ, ಅನ್ಯಾಯ, ಶೋಷಣೆ, ಸಂಸಾರ, ಜಾತಿ–ಕುಲದಂಥ ಸಾಕಷ್ಟು ವಿಷಯಗಳನ್ನು ಕೇಂದ್ರ ವಸ್ತುವಾಗಿಸಿಕೊಂಡು, ಸಮಕಾಲೀನ ಚಿತ್ರಣವನ್ನು ಕಣ್ಣಿಗೆ ಕಟ್ಟುವ ಹಾಗೇ ಎಲ್ಲರ ಮುಂದೆ ತೆರೆ ದಿಟ್ಟಿದ್ದಾರೆ.

ದಾಸ ಸಾಹಿತ್ಯವು ಮನುಷ್ಯನ ಜೀವನವನ್ನು ಮೌಲ್ಯಮಾಪನ ಮಾಡುವ ಒಂದು ಮಾಧ್ಯಮವೇ ಆಗಿರುತ್ತದೆ. ಈ ಹರಿದಾಸರು ಭಕ್ತಿಯ ಜೊತೆಗೆ ಸಮಾಜದ ಕಡೆಗೂ ಹೆಚ್ಚು ಒತ್ತನ್ನು ಕೊಟ್ಟು ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ಹೇಗೆ ಬದುಕಬೇಕು, ಎಂಥ ಮೌಲ್ಯಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಎಂಬಂಥ ನೀತಿಯ ಮಾತುಗಳನ್ನು ಹೇಳುವುದರ ಮೂಲಕ ಸಮಾಜಕ್ಕೆ ದಾರ್ಶನಿಕ ಮಾರ್ಗದರ್ಶಿಯಾದರು. ಹಾಗೆಯೇ ತತ್ವಪದಕಾರರ ಸಾಹಿತ್ಯದಲ್ಲಿಯೂ ಸಮಾಜದಲ್ಲಿ ಹಿಂದಿನಿಂದಲೂ ಬಡವರು ಮತ್ತು ಶ್ರೀಮಂತರೊಡನೆ ತಾರತಮ ಭಾವನೆ ಎದ್ದು ತೋರುತ್ತಿದೆ. ಶ್ರೀಮಂತರ ತಮ್ಮಲ್ಲಿರುವ ಹಣದ ಮದದಿಂದ ಬಡವರೊಂದಿಗೆ ಅಹಂಕಾರದಿಂದ ಕೀಳಾಗಿ ವರ್ತಿಸುತ್ತಾ, ಅವರನ್ನು ಪ್ರತಿನಿತ್ಯ ಶೋಷಣೆಯನ್ನು ಮಾಡುತ್ತಿದ್ದಾರೆ. ಅಂಥ ಶ್ರೀಮಂತ ಅಹಂಕಾರಿಗಳನ್ನು ಕುರಿತು ದಾಸರು ಹೀಗೆ ಒಂದು ಕೀರ್ತನೆಯನ್ನು ಕಟ್ಟಿದ್ದಾರೆ. ಅಂದೆಂದರೆ;

*"ಕೊಬ್ಬಲಿರಬೇಡ ಮನುಜ ನೀನು ಕೊಬ್ಬಲಿರಬೇಡ*
*ಸಿರಿಮಾನ ಬಂದಾಗ ಬಿರಿ ಬಿರಿ ನಡೆವರು*
*ಸರಿಯಲಾರಿನೆಂದು ಮಿಡುಕುವರು*
*ಸಿರಿ ಹೋದ ಮರುದಿನ ಬಡತನ ಬಂದರೆ*
*ಹುರುಕು ಹತ್ತಿದಂತೆ ಕೆರೆಕೊಂಬರಯ್ಯ"*

ಈ ಭೂಮಿಯ ಮೇಲೆ ಬದುಕುತ್ತಿರುವ ಯಾವ ಮನುಷ್ಯನಿಗೂ ಸಿರಿತನವೆಂಬುದು ಶಾಶ್ವತವಲ್ಲ. ಶ್ರೀಮಂತ ಬಡವನಾಗಬಹುದು ಅಥವಾ ಬಡವ ಶ್ರೀಮಂತನಾಗಬಹುದು ಎಂಬ ಅರಿವೂ ಎಲ್ಲರಿಗೂ ಇರಬೇಕಾಗುತ್ತದೆ. ಆದರೆ ಕೆಲವು ಶ್ರೀಮಂತರು ಈ ಸತ್ಯವನ್ನು ತಿಳಿದುಕೊಳ್ಳದೆ ಹಣದ ಸೊಕ್ಕಿನಿಂದ ಬಡವರನ್ನು ತುಚ್ಛವಾಗಿ, ಕೇವಲವಾಗಿ, ಕಂಡು ಹೀಯಾಳಿಸುವುದುಂಟು. ಇಂಥವರನ್ನೇ ದಾಸರು ಕೊಬ್ಬಲಿರಬೇಡ ಮನುಜ ಎಂದಿರುವುದು. ಇಲ್ಲಿ ಸಂಪತ್ತು, ಅಧಿಕಾರ ಇದ್ದಾಗ ಎಲ್ಲರೂ ನಮ್ಮವರೆನ್ನುವರು. ಅವು ಹೋದ ಬಳಿಕ ದೂರವಾಗುವರು. ಆದ ಕಾರಣ ಅಧಿಕಾರ ಮತ್ತು ಸಂಪತ್ತು ಇದ್ದಾಗ ಚಿತ್ತ ಸ್ವಾಸ್ಥ್ಯವನ್ನು ಕಳೆದುಕೊಳ್ಳವಾರದೆಂಬ ಎಚ್ಚರಿಕೆಯೇ ಈ ಕೀರ್ತನೆಯ ಬಹುಮುಖ್ಯವಾದಂಥ ಸಾರವಾಗಿದೆ.

ಪುರಂದರದಾಸರು ಸಮಾಜದಲ್ಲಿನ ಡಾಂಭಿಕತನ ಹಾಗೂ ಮಾನವರ ವರ್ತನೆಗಳ ಬಗೆಗೆ ಸಮಗ್ರವಾಗಿಯೇ ಸಮಷ್ಠಿ ಚಿಂತನೆಯನ್ನು ಮಾಡಿ, ಸ್ಪಷ್ಟ ಹಾಗೂ ಹರಿತವಾದ ನುಡಿಗಳಲ್ಲಿ ಅಂಕು–ಡೊಂಕುಗಳನ್ನು ಎತ್ತಿಹಿಡಿದು ಆ ತಪ್ಪುಗಳನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಒಂದು ಕೀರ್ತನೆಯು ಈ ಕೆಳಗಿನಂತಿದೆ. ಅಂದರೆ;

***"ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ***
***ಸುಜ್ಞಾನಿಗಳ ಕೂಡೆ ಜನಗಳವೇ ಸೇಸು ಎಂದಿದ್ದಾರೆ".***

ನಾವು ಬದುಕುತ್ತಿರುವ ಅಕ್ಕಪಕ್ಕದಲ್ಲಿ ಎಂಥ ಜನರಿರುತ್ತಾರೆಂಬುದು ಮುಖ್ಯವಾಗುತ್ತದೆ. ಏಕೆಂದರೆ ಒಬ್ಬರ ಪ್ರಭಾವ ಮತ್ತೊಬ್ಬರ ಮೇಲಾಗುವುದು ಸಹಜವಾದ್ದರಿಂದ ನಮ್ಮ ಸುತ್ತಮುತ್ತಲಿನ ಜನರು ಗುಣವಂತರಾಗಿದ್ದರೆ, ಬುದ್ಧಿವಂತರಾಗಿದ್ದರೆ, ಜ್ಞಾನಿಗಳಾಗಿದ್ದರೆ ನಾವು ಸಹ ಅವರ ಪ್ರಭಾವದಿಂದ ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಬದುಕಲು ಸಾಧ್ಯವಾಗುತ್ತದೆ. ಇಲ್ಲದೆ ಅಜ್ಞಾನಿಗಳು, ದುರಾಚಾರಿಗಳದ್ದು ಅಂಥವರ ಸಹವಾಸವನ್ನು ಮಾಡಿದರೆ, ನಾವೂ ಕೂಡ ಅವರಿಂದ ಅಂಥ ಗುಣಗಳಿಂದಲೇ ಪ್ರೇರಿತರಾಗಿ ನಮ್ಮಲ್ಲಿರುವ ಅಲ್ಪಸ್ವಲ್ಪ ಒಳ್ಳೆಯ ಗುಣಗಳನ್ನು ನಾಶಪಡಿಸಿಕೊಳ್ಳುತ್ತೇವೆ. ಹಾಗಾಗಿ ದಾಸರು ಅಜ್ಞಾನಿಗಳ ಸಂಗಕ್ಕಿಂತ. ಸುಜ್ಞಾನಿಯ ಸಂಗವನ್ನು ಮಾಡಿ ಎಲ್ಲರೂ ಜ್ಞಾನಿಗಳಾಗಬೇಕೆಂಬ ನೀತಿಸಾರದ ಮಾತನ್ನು ಸ್ಪಷ್ಟಪಡಿಸಿದ್ದಾರೆ.

ಭಾಗವತ್ತ್ವ ರೂಪವಾಗಲೀ, ಸಾಧನೆಯಾಗಲೀ ಯಾವ ಲೌಕಿಕ ಪ್ರಮಾಣದಿಂದಲೂ ಸಿದ್ಧವಾಗುವುದಿಲ್ಲ. ಅದನ್ನು ಬಲ್ಲವರಿಂದ ತಿಳಿದುಕೊಳ್ಳುವುದೊಂದೇ ದಾರಿ. ಹಾಗಾಗಿ ಅದೆಲ್ಲವನ್ನು ತಿಳಿಸಿಕೊಡುವವನೇ ಗುರು. ಇಂಥ ಸದ್ಗುಣವಿರುವ ಗುರುವಿನ ಸ್ಮರಣೆಯಿಂದ ಸಕಲ ವಿಪತ್ತುಗಳು ದೂರವಾಗಿ, ಅವುಗಳಿಗೆ ಪರಿಹಾರ ದೊರಕಿ, ಹರಿಯು ಬಂದು ಪೊರೆಯುತ್ತಾನೆಂಬ ನಂಬಿಕೆ ದಾಸರದ್ದಾಗಿದೆ. ಗುರುವಿನ ಮಹತ್ವವನ್ನು ಪುರಂದರದಾಸರು ತಮ್ಮ ಒಂದು ಕೀರ್ತನೆಯನ್ನು ಹೀಗೆ ರಚಿಸಿದ್ದಾರೆ. ಅದೇನೆಂದರೆ;

***"ಗುರುವಿನ ಗುಲಾಮನಾಗುವ ತನಕ***
***ದೊರೆಯದಣ್ಣ ಮುಕುತಿ***
***ಪರಿಪರಿ ಶಾಸ್ತ್ರವೋದಿದರೇನು***
***ವ್ಯರ್ಥವಾಯಿತು ಭಕುತಿ***
***ಆರು ಶಾಸ್ತ್ರವೋದಿದರಿಲ್ಲ ಮೂ***
***ರಾರು ಪುರಾಣವ ಮುಗಿಸಿದರಿಲ್ಲ***
***ಸಾಧು ಸಜ್ಜನರ ಸಂಗವ ಮಾಡದೆ***
***ಧೀರನಾಗಿ ತಾ ಮೆರೆದರೆ ಇಲ್ಲ"***

ಇಲ್ಲಿ 'ಗುಲಾಮ' ಎಂದರೆ; ಅಹಂಕಾರ ರಹಿತವಾದ ಮನೋಧರ್ಮ ಎಂದರ್ಥ. ಸಾಧನೆಗೆ ಹೊರಗಿನ ಆಚಾರಕ್ಕಿಂತ ಅಂತರಂಗದ ಗುರುವಿನ ಮೇಲಿನ ಗೌರವಪೂರ್ವಕ ಅವಿಷ್ಕಾರ ಅವಶ್ಯವಾದುದು ಎಂಬುದೇ ಈ ಕೀರ್ತನೆಯ ಆಶಯ. ಪ್ರತಿಯೊಬ್ಬ ಶಿಷ್ಯನು ಅಂತರಂಗ ಭಕ್ತಿಯಿಂದ ಗುರುವನ್ನು ಭಜಿಸಿದರೆ, ಸ್ಮರಿಸಿದರೆ, ಮುಕ್ತಿಯು ದೊರೆಯುತ್ತದೆಂಬ ನೀತಿಯ ಮಾತನ್ನು ಹೇಳಿದ್ದಾರೆ. ದಾಸರು ಪ್ರತಿಯೊಬ್ಬ ಗುರುವು ಸಹ ತನ್ನ ಶಿಷ್ಯರನ್ನು ನಿಸ್ವಾರ್ಥದಿಂದ ಸರಿಯಾದ ಮಾರ್ಗದಲಿ ಕರೆದೊಯ್ಯಬೇಕು. ಇಲ್ಲದಿದ್ದರೆ ಅಂತಹ ಶಿಷ್ಯನ ಪಾಡು 'ಅಂಧಕನ ಕೈಯ ಇನ್ನೊಬ್ಬ ಅಂಧಕನು ಹಿಡಿದಂತಾಗುತ್ತದೆ' ಎಂದಿದ್ದಾರೆ. ಇಲ್ಲಿ ದಾಸರ ದೃಷ್ಟಿಯು ಗುರುವೆನ್ನಿಸಿಕೊಳ್ಳಬೇಕಾದವನು ಸಾಧನೆಯ ಮಟ್ಟವೇನಿರಬೇಕೆಂಬುದರ ಕಡೆಗೂ ಹರಿದಿದೆ ಎನ್ನಬಹುದು.

ಪ್ರತಿಯೊಬ್ಬರ ಜೀವನದಲ್ಲಿ ತಂದೆ ತಾಯಿಗಳು ಪ್ರತ್ಯಕ್ಷ ದೇವರುಗಳು. ಹಾಗೆಯೇ ಎರಡು ಕಣ್ಣುಗಳು ಇದ್ದ ಹಾಗೆ. ಅಂತಹ ತಂದೆ ತಾಯಂದಿರು ತಮ್ಮ ಮಕ್ಕಳನ್ನು ಚಿಕ್ಕಂದಿನಿಂದ ಅನ್ನ ಹಾಕಿ, ಬಟ್ಟೆ ಕೊಡಿಸಿ, ವಿದ್ಯೆಯನ್ನು ನೀಡಿ, ಹಲವು ಕನಸುಗಳನ್ನು ಕಟ್ಟಿಕೊಂಡು ಅತ್ಯಂತ ಪ್ರೀತಿಯಿಂದ ಸಾಕಿ ಸಲಹುತ್ತಾರೆ. ಆದರೆ ಅದೇ ಮಕ್ಕಳು ತನ್ನ ಹೆತ್ತ ಹೊತ್ತು, ಸಾಕಿ ಸಲುಹಿದ, ತಂದೆ ತಾಯಿತರನ್ನು ನೋಯಿಸಿದರೆ ಅಂತಹವರಿಗೆ ಮುಕ್ತಿ ಸಿಗುವುದಿಲ್ಲ ಎಂಬುದು ದಾಸರ ನಂಬಿಕೆಯಾಗಿದೆ.

***"ಹೆತ್ತ ತಾಯ್ತಂದೆಗಳ ಚಿತ್ತವ ನೋಯಿಸಿ***
***ನಿತ್ಯ ದಾನವ ಮಾಡಿ ಫಲವೇನು***
***ಸತ್ಯ ಸದಾಚಾರ ಇಲ್ಲದವನು ಜಪ***
***ಹತ್ತು ಸಾವಿರ ಮಾಡಿ ಫಲವೇನು?"***

ತಂದೆ ತಾಯಿಗಳು ಬದುಕಿದ್ದಾಗ ಅವರನ್ನು ಪ್ರೀತಿಯಿಂದ ನೋಡಿಕೊಳ್ಳುವುದು ಪ್ರತಿಯೊಬ್ಬ ಮಕ್ಕಳ ಕರ್ತವ್ಯ. ಆದರೆ ಅವರು ಜೀವಂತವಾಗಿರುವಾಗ ಅವರಿಗೆ ಅನ್ನ ಹಾಕದೆ, ಪ್ರೀತಿಯಿಂದ ನೋಡಿಕೊಳ್ಳದೆ ಅವರಿಗೆ ನೋವನ್ನುಂಟು ಮಾಡಿ ನಿತ್ಯ ದಾನವನ್ನು ಮಾಡಿದರೆ ಪ್ರಯೋಜನವಿಲ್ಲ. ಹಾಗೆಯೇ ಸತ್ಯ,

ಸದಾಚಾರಗಳು ಇಲ್ಲದ ವ್ಯಕ್ತಿಗಳು ಎಷ್ಟು ಬಾರಿ ಜಪವನ್ನು ಮಾಡಿದರೂ ಏನೂ ಪ್ರಯೋಜನವಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ. ಮತ್ತೊಂದು ಕೀರ್ತನೆಯಲ್ಲಿ 'ಮಾತಾಪಿತರನು ಬಳಲಿಸಿದಾತನು ಯಾತ್ರೆಯ ಮಾಡಿದರೇನು ಫಲ' ಎಂದಿದ್ದಾರೆ. ಪ್ರತಿಯೊಬ್ಬ ಮಗನು ತನ್ನ ಮನೆಯಲ್ಲಿರುವ ಪ್ರತ್ಯಕ್ಷ ದೇವರುಗಳ ಸೇವೆ ಮಾಡುತ್ತಾ ಅವರ ಮನಸ್ಸನ್ನು ತೃಪ್ತಿಪಡಿಸಿದರೆ ಸಾಕು. ಅದು ಆತನಿಗೆ ಯಾತ್ರೆಯನ್ನು ಮಾಡಿದಷ್ಟು ಫಲ ಲಭಿಸುತ್ತದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಜಾಲಿಯ ಮರವು ಬುಡದಿಂದ ತುದಿಯವರೆಗೆ ಹೇಗೆ ಮುಳ್ಳುಗಳನ್ನು ಹೊಂದಿರುತ್ತದೆಯೋ, ಹಾಗೆಯೇ ದುರ್ಜನರು ಅಡಿಯಿಂದ ಮುಡಿಯವರೆಗೂ ಬರಿ ಕೆಟ್ಟ ಗುಣಗಳನ್ನೇ ಹೊಂದಿರುತ್ತಾರೆ. ಜಾಲಿಯ ಮರವು ಹೇಗೆ ನಿರುಪಯುಕ್ತವೋ ಹಾಗೆಯೇ ದುರ್ಜನರಿಂದ ಸಮಾಜಕ್ಕಾಗಲೀ, ಸಜ್ಜನರಿಗಾಗಲೀ, ಯಾವ ಉಪಯೋಗವೂ ಇಲ್ಲ. ಆದ್ದರಿಂದ ನಾವುಗಳು ಒಳ್ಳೆಯವರ, ಸಜ್ಜನರ ಸಹವಾಸವನ್ನು ಮಾಡಬೇಕೆಂದು ತಿಳಿಸಿದ್ದಾರೆ. ಸರ್ವಜ್ಞನು ಒಂದೆಡೆ 'ಸಜ್ಜನರ ಸಂಗವು ಹೆಜ್ಜೇನು ಸವಿದಂತೆ' ಎಂದಿದ್ದಾರೆ. ಆದರೆ ದುಷ್ಟರು ಸಮಾಜಕ್ಕೆ ಬೇಡದಿದ್ದರೂ, ಸಮಾಜ ಇಂತಹವರನ್ನು ಬಯಸದಿದ್ದರೂ ತಾವಾಗಿಯೇ ವಿಕೃತವಾಗಿ ಬೆಳೆದು ವಿಜೃಂಭಿಸುತ್ತಾರೆ. ಜಾಲಿಯ ಮರ ಹೇಗೆ ನೆರಳನ್ನು ಕೊಡಲಗದೋ ಹಾಗೆಯೇ ಸಮಾಜವು ಇಂತಹವರಿಂದ ಏನನ್ನು ನಿರೀಕ್ಷಿಸಲಾರದು. ಪುರಂದರದಾಸರು ಇಂತಹವರನ್ನು ಬೇವು ಮತ್ತು ಹಾವಿಗೆ ಹೋಲಿಸಿ ವ್ಯಂಗ್ಯ ಮಾಡಿದ್ದಾರೆ.

*"ಬೇವು ಬೆಲ್ಲದೊಳಿಡಲೇನು ಫಲ*

*ಹಾವಿಗೆ ಹಾಲೆರದರೇನು ಫಲ*

*ಕುಟಿಲವ ಬಿಡದಿಹ ಮನುಜರು*

*ಮಂತ್ರವ ಪಠನೆಯ ಮಾಡಿದರೇನು ಫಲ"*

ದಾಸರು ಇಲ್ಲಿ ಬೇವಿನ ಬೀಜ ಬಿತ್ತಿ ಬೆಲ್ಲದ ಕಟ್ಟೆಯನ್ನು ಕಟ್ಟಿ ಜೇನುಮಳೆಗರೆದರೆ ಹೇಗೆ ತನ್ನ ವಿಷವನ್ನು ಬಿಡುವುದಿಲ್ಲವೋ, ಹಾವಿಗೆ ಎಷ್ಟೇ ಹಾಲನ್ನು ಎರೆದರೆ ತನ್ನ ವಿಷವನ್ನು ಬಿಡುವುದಿಲ್ಲವೋ, ಹಾಗೆಯೇ ದುರ್ಜನರಿಗೆ ಎಷ್ಟೇ ಬೋಧನೆಯನ್ನು ಮಾಡಿದರೂ, ಹಿತನುಡಿಗಳನ್ನು ಹೇಳಿದರೂ ತಮ್ಮಲ್ಲಿರುವ ದುರ್ಗುಣವನ್ನು ಬಿಡುವುದಿಲ್ಲ. ಕೆಲವರು ಎಷ್ಟು ಓದಿದರೂ, ಏನು ಕೇಳಿದರೂ ಪ್ರಯೋಜನವಾಗುವುದಿಲ್ಲ. ಏಕೆಂದರೆ ಇಂತಹವರ ಮನದಲ್ಲಿ ಅಜ್ಞಾನ ತುಂಬಿ ತುಳುಕುತ್ತಿರುತ್ತದೆ. ಹಾಗಾಗಿ ನಾವು ಮೊದಲು ನಮ್ಮ ಮನಸ್ಸಿನ ಕತ್ತಲೆಯನ್ನು ಹೋಗಲಾಡಿಸಿಕೊಳ್ಳಬೇಕೆಂದು ಪುರಂದರದಾಸರು ತಿಳಿಸಿದ್ದಾರೆ.

ಪುರಂದರದಾಸರು ಸಮಾಜದಲ್ಲಿ ಪ್ರತಿಯೊಬ್ಬ ಮನುಷ್ಯನು ಹೇಗೆ ಬದುಕಬೇಕೆಂಬ ಚಾಟೋಕ್ತಿಯನ್ನು ತಮ್ಮ ಕೀರ್ತನೆಯಲ್ಲಿ ನೀಡಿದ್ದಾರೆ.

*'ಕಳ್ಳತನವ ಮಾಡಿ ಒಡಲು ಹೊರೆಯಲು ಬೇಡ*

*ಸುಳ್ಳನಾಗಿ ನೀನು ತಿರುಗಲು ಬೇಡ*

*ಒಳ್ಳೆಯ ಜನಗಳ ನಿಂದನೆಯನು ನೀನು ಮಾಡಬೇಡ*

*ಒಳ್ಳಯವನೆಂದರೆ ಹಿಗ್ಗಬೇಡ'*

ಮನುಷ್ಯ ಸಮಾಜದಲ್ಲಿ ಹೇಗೆ ಬೇಕಾದರೂ ಬದುಕುಬಹುದು. ಆದರೆ ಒಳ್ಳೆಯ ಸನ್ನಡತೆ, ಸದ್ಗುಣಗಳನ್ನೊಳಗೊಂಡ ಮನುಷ್ಯನಾಗಿ ಜೀವಿಸುವುದು ಬಹಳ ಮುಖ್ಯವಾಗುತ್ತದೆ. ತನ್ನ ಜೀವಿತದ ದಿನಗಳಲ್ಲಿ ಕಳ್ಳನಾಗದೆ, ಸುಳ್ಳನಾಗದೆ, ಬೇರೆಯವರನ್ನು ನಿಂದಿಸದೆ, ತನ್ನನ್ನು ಯಾರಾದರೂ ಹೊಗಳಿದರೆ ಹಿಗ್ಗದೆ ಬದುಕಬೇಕು ಎಂದಿದ್ದಾರೆ. ಪ್ರತಿಯೋರ್ವ ವ್ಯಕ್ತಿಯು ನೀತಿವಂತನಾದರೆ ಇಡೀ ಸಮಾಜವೇ ಒಳ್ಳೆಯದಾಗುತ್ತದೆ. ಆದ್ದರಿಂದ ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಬದುಕನ್ನು ರೂಪಿಸಿಕೊಳ್ಳಬೇಕೆಂಬುದೇ ದಾಸರ ಅಭಿಪ್ರಾಯದ ತಿರುಳಾಗಿದೆ.

ದಾಸರು ಮತ್ತೊಂದೆಡೆ ಮಾನವನ ಬದುಕು ಸಾರ್ಥಕತೆಯನ್ನು ಪಡೆಯಬೇಕಾದರೆ ಕೆಲವೊಂದು ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದಿದ್ದಾರೆ ಮಾಡದೆ, ಆತಂಕ ಪಡದೆ, ತಳಮಳಗೊಳ್ಳದೆ, ಜಗತ್ತಿನಲ್ಲಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಿದೆ ಎಂಬ ನಂಬಿಕೆಯಿಂದ, ತಾಳ್ಮೆಯಿಂದ, ಬದುಕನ್ನು ನಡೆಸಬೇಕು ಎಂಬುದನ್ನು ಕನಕದಾಸರು ತಮ್ಮ ಕೀರ್ತನೆಯಲ್ಲಿ ಹೀಗೆ ಹೇಳಿದ್ದಾರೆ. ಅದೆಂದರೆ;

*"ತಲ್ಲಣಿಸದಿರು ಕಂಡ್ಯ ತಾಳು ಮನವೇ*

*ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ*

*ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ*

*ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ*

*ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು*

*ಗಟ್ಟಾಗಿ ಸಲಹುವನು ಇದಕೆ ಸಂಶಯವಿಲ್ಲ."*

ಕನಕದಾಸರು ಪ್ರತಿಯೊಬ್ಬರ ಜೀವನದಲ್ಲಿ ಕಷ್ಟ, ಸಮಸ್ಯೆಗಳು ಎದುರಾಗುವುದು ಸಾಮಾನ್ಯ ಅಂಥ ಸಮಸ್ಯೆಗಳಿಗೆ ಎಂದೂ ಹೆದರಬಾರದು. ಪ್ರತಿಯೊಂದು ಸಮಸ್ಯೆಗಳಿಗೂ ಆ ದೇವರು ಪರಿಹಾರವನ್ನು ಕೊಟ್ಟಿರುತ್ತಾನೆ. ಹಾಗಾಗಿ ಬದುಕಿನಲ್ಲಿ ತಾಳ್ಮೆ ಬಹಳ ಮುಖ್ಯ ಎಂದಿದ್ದಾರೆ. 'ಹುಟ್ಟಿಸಿದ ದೇವರು ಹುಲ್ಲು ನೀರು ಕೊಟ್ಟೇ ಕೊಡುತ್ತಾನೆ' ಎಂಬ ಮಾತಿನಂತೆ ಹುಟ್ಟಿದವನಿಗೆ ಸಲಹುವ ಹೊಣೆ ಇದ್ದೇ ಇರುತ್ತದೆ. ಅದಕ್ಕೆ ಚಿಂತಿಸುವ ಅಗತ್ಯವಿಲ್ಲ. ಬೆಟ್ಟದ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ ನೀರು ಎರೆದವರು ಯಾರು? ಕಲ್ಲಿನಲ್ಲಿ ಹುಟ್ಟುವ ಕಪ್ಪೆಗೆ ಆಹಾರವನ್ನು ನೀಡುವವರು ಯಾರು? ಎಂದು ಪ್ರಶ್ನಿಸುವುದರ ಮೂಲಕ ಅದಕ್ಕೆ ಆಧಾರ ಸಹಿತವಾಗಿ ನಂಬಿಕೆಯನ್ನು ದೃಢಗೊಳಿಸುತ್ತಾರೆ. ಈ ಜಗತ್ತಿನಲ್ಲಿ ಎಲ್ಲವೂ ಭಗವಂತನ ಅಧೀನವಾಗಿದೆ.

ಆದರೆ ಮನುಷ್ಯ ಮಾತ್ರ ಆತನು ಆಡಿಸಿದಂತೆ ಆಡುವ ಗೊಂಬೆಯಿದ್ದಂತೆ ಎಂದಿದ್ದಾರೆ. ದಾಸರ ಈ ಸಕಾರಾತ್ಮಕ ಧೋರಣೆ ಬದುಕಿನ ಪ್ರೀತಿಗೆ, ಭರವಸೆಯ ಬದುಕಿಗೆ, ದಾರಿ ಮಾಡುತ್ತದಲ್ಲದೆ ಮನುಷ್ಯನು ಪ್ರಯತ್ನಶೀಲನಾಗಲು ಪ್ರೇರೇಪಿಸುತ್ತದೆ.

ಹೀಗೆ, ಹರಿದಾಸರು ತಮ್ಮ ಅನುಭವಗಳ ಮೂಲಕ, ಸಮಾಜದಲ್ಲಿರುವ ಕೆಟ್ಟವರನ್ನು, ಕೆಟ್ಟತನವನ್ನು, ತಿದ್ದುವುದರ ಮೂಲಕ, ಉತ್ತಮ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡುವ ಧ್ಯೇಯವನ್ನು ಇಟ್ಟುಕೊಂಡು ನೀತಿಯುತ ಮಾತುಗಳನ್ನು ಜನರಿಗೆ ಉಸುರಿದರು. ಇಂತಹ ಸತ್ವಯುತವಾದ ಮಾತುಗಲು ಪರಿಶುದ್ಧವಾದ ಬದುಕಿಗೆ, ಜ್ಞಾನಕ್ಕೆ, ತಿಳುವಳಿಕೆಗೆ, ಸಾರ್ಥಕವಾದ ಬದುಕಿಗೆ ದಾರಿದೀಪವಾಗಿವೆ.

## ಗ್ರಂಥಋಣ

1. ಚಿಕ್ಕಮಗಳೂರು ಗಣೇಶ, 2014, **ಸಂತಕವಿ ಕನಕದಾಸರು,** ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು
2. ಚೇತನ ಆಚಾರ್ ಎನ್, 2019, **ಭಕ್ತಿ ಸಂಗೀತದ ಅಗ್ರಪೀಠ – ಉಡುಪಿ ಕ್ಷೇತ್ರ,** ಪಿಎಚ್.ಡಿ ಮಹಾಪ್ರಬಂಧ, ಜೈನ ವಿಶ್ವವಿದ್ಯಾಲಯ, ಬೆಂಗಳೂರು
3. ನರೇಂದ್ರಬಾಬು ಸಿ.ಆರ್, 2019, , **ಹರಿದಾಸ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಒಂದು ತೌಲನಿಕ ಅಧ್ಯಯನ,** ಪಿಎಚ್.ಡಿ ಮಹಾಪ್ರಬಂಧ, ಜೈನ ವಿಶ್ವವಿದ್ಯಾಲಯ, ಬೆಂಗಳೂರು
4. ಪುಷ್ಪಲತಾ ಎಚ್.ಎನ್, 2017, **ವಚನ ಮತ್ತು ದಾಸಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ,** ಪಿಎಚ್.ಡಿ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ
5. ರಾಮಶೇಷನ್. ನಿ.ಕೃ, 1991, **ಹರಿದಾಸ ಆಂದೋಲನ : ಒಂದು ಅಧ್ಯಯನ,** ಪಿಎಚ್.ಡಿ ಮಹಾಪ್ರಬಂಧ, ಮಿತ್ರ ಪ್ರಿಂಟರ್ಸ್ ವಿದ್ಯಾರಣ್ಯಪುರಂ, ಮೈಸೂರು.
6. ವಾರುಣಿ. ಸಿ.ಎಸ್, **ಹರಿದಾಸ ಸಾಹಿತ್ಯ 'ಧಾತು–ಮಾತು' ಒಂದು ಅಧ್ಯಯನ,** ಪಿಎಚ್.ಡಿ ಮಹಾಪ್ರಬಂಧ, ಜೈನ ವಿಶ್ವವಿದ್ಯಾಲಯ, ಬೆಂಗಳೂರು
7. ರವಿ.ಬಿ.ಕೆ., ದೊಡ್ಡಮನಿ ಸಿ.ಡಿ. 2017, **ಕನಕದಾಸರ ಸಮಗ್ರ ಕಾವ್ಯಾಧ್ಯಯನ : ಭಾಗ–3 ಮೋಹನತರಂಗಿಣಿ,** ಪ್ರಸಾರಾಂಗ ಕನಾಟಕ ವಿರ್ಶವವದ್ಯಾಲಯ, ಧಾರವಾಡ.
8. ಶಭಾ ಮರವಂತೆ. 2018, **ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ (ಸಂಸೋಧನಾ ಕೃತಿ),** ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.

***ISSN (E):2582-225X*, VOL-2, ISSUE -6, MAR-APRIL, 2021, 01-12**


೯. ಶ್ಯಾಮಾಚಾರ್ಯ.ಎ.ಬಿ, ಪರುಶುರಾಂ ಬೆಟಗೇರಿ., **ಹರಿದಾಸ ತರಂಗ (ಹರಿದಾಸರ ಸಾವಿರ ಪದಗಳ ಅನುವಾದ ಮಾಲಿಕೆ)** ಭಾರತೀಯ ಹರಿದಾಸ ಸಾಹಿತ್ಯ ವಿದ್ಯಾಲಯ, ಬೆಂಗಳುರು.

10. ಶ್ರೀನಿವಾಸ ಸನ್ಮಾನ ಸಮಿತಿ ಪಾ.ಶ. 2018, **ಶಿವಶರಣರು ಮತ್ತು ಹರಿದಾಸರು ತೌಲನಿಕ ಅಧ್ಯಯನ,** ಅಂಕನಹಳ್ಳಿ ಪ್ರಕಾಶನ, ರಾಮನಗರ.

11. ಶ್ರೀನಿವಾಸ ಹಾವನೂರು, ಹೊ.ರಾ.ಸತ್ಯನಾರಾಯಣ ರಾವ್, 2002, **ಪುರಂದರದಾಸರ ಜನಪ್ರೀಯ ಕೀರ್ತನೆಗಳು,** ಅಂಕಿತ ಪುಸ್ತಕ, ಬೆಂಗಳೂರು.

12. ಸಿದ್ಧಲಿಂಗಯ್ಯ. ಹೆಚ್. 2016, **ಕನಕ ಕಾವ್ಯ ಸಂಪುಟ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.